ಕರ್ನಾಟಕ ಸರ್ಕಾರ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
(ಪ್ರಾದೇಶಿಕ), ಬೆಂಗಳೂರು
Office of the Chief Conservator of Forests,
(Territorial) Bengaluru
ದೂರವಾಣಿ-080-23344686

ಜಾರಕಬಂಡೆ ಕಾವಲ್, ಕಮ್ಮಗೊಂಡನಹಳ್ಳಿ
ಜಾಲಹಳ್ಳಿ ಪಶ್ಚಿಮ, ಬೆಂಗಳೂರು-560015
Jarakabande Kaval, Kammagondanahalli ,
Jalahalli West, Bengaluru-560015
E-mail: cfbangalore.hg@gmail.com

ಸಂಖ್ಯೆ: ಎ11/ಭೂಮಿ/ಸಿಆರ್-45/2022-23 ದಿನಾಂಕ: 23-12-2022

ಇವರಿಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ),
ಅರಣ್ಯ ಭವನ, ಬೆಂಗಳೂರು

ಮಾನ್ಯರೆ,

ವಿಷಯ: ಇಟಕಲದುರ್ಗ 4ನೇ ಬ್ಲಾಕ್‌ನ ರಾಜ್ಯ ಅರಣ್ಯ ಪ್ರದೇಶದ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸರ್ವೆ ನಂ. 51 ರ ಅರಣ್ಯ ಪ್ರದೇಶದಲ್ಲಿ 2.4346 ಹೆ. ಪ್ರದೇಶ ರಸ್ತೆಗಾಗಿ ಉಪಯೋಗಿಸಲು ಪರ್ಯಾರ್ಯವಾಗಿ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸರ್ವೆ ನಂ. 53 ಮತ್ತು ದೇವರಾಳ್ಳಪಲ್ಲಿ ಸರ್ವೆ ನಂ. 62 ರಲ್ಲಿ ಗುರುತಿಸಿರುವ ಸಿ.ಎ. ಲ್ಯಾಂಡ್‌ಗೆ ಅಭಿಪ್ರಾಯ ನೀಡಲು ಕೋರಿರುವ ಬಗ್ಗೆ

ಉಲ್ಲೇಖ:
1. ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರ ಕಛೇರಿ ಪತ್ರ ಸಂಖ್ಯೆ: ಎ3/ಲ್ಯಾಂಡ್/ಸಿಆರ್-75/2022-23 ದಿನಾಂಕ: 06-12-2022
2. ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ, ಚಿಕ್ಕಬಳ್ಳಾಪುರ ರವರ ಕಛೇರಿ ಪತ್ರ ಸಂಖ್ಯೆ:ಕಾ.ಅ/ಯೋ.ವಿ/ಚಿಪುರ/ಸಿ-1/2022-23 ದಿನಾಂಕ: 29-11-2022
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚಿಂತಾಮಣಿ ಉಪ ವಿಭಾಗ, ಚಿಂತಾಮಣಿ, ರವರ ಕಛೇರಿ ಪತ್ರ ಸಂಖ್ಯೆ: ಸಅಸಂ/ಚಿಂ.ಉ.ವಿ/ ಹರಾಜು/ಸಿಆರ್-2022-23 ದಿನಾಂಕ: 26-07-2022
4. ವಲಯ ಅರಣ್ಯಾಧಿಕಾರಿ, ಬಾಗೇಪಲ್ಲಿ ವಲಯ ಬಾಗೇಪಲ್ಲಿ ರವರ ಕಛೇರಿ ಪತ್ರ ಸಂಖ್ಯೆ: ಎ3/ಲ್ಯಾಂಡ್/ಸಿಆರ್-75/2022-23 ದಿನಾಂಕ: 06-12-2022.

ಮೇಲಿನ ಮಾರ್ಗಪಲ್ಲಟ್ಟ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರಿಂದ ಮಾಹಿತಿ ಹಾಗೂ ಅಗತ್ಯ ದಾಖಲಾತಿಗಳನ್ನು ಪಡೆದು, ಉಲ್ಲೇಖ(1)ರ ಪತ್ರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರು ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಪಾತಪಾಳ್ಯದಿಂದ ಪೋಲನಾಯಕನಹಳ್ಳಿವರೆಗೂ ಒಟ್ಟು 15.272 ಕಿ.ಮೀನಷ್ಟು ರಸ್ತೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-3ರಡಿ ಅಭಿವೃದ್ಧಿ ಪಡಿಸುತ್ತಿದ್ದು, ಸದರಿ ರಸ್ತೆಯು ಇಟಕಲದುರ್ಗ 4ನೇ ಬ್ಲಾಕ್‌ನ ರಾಜ್ಯ ಅರಣ್ಯ ಪ್ರದೇಶದ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸರ್ವೆ ನಂ. 51ರ ಅರಣ್ಯ ಪ್ರದೇಶದಲ್ಲಿ ಹಾದುಹೋಗುತ್ತಿದ್ದು, ಸುಮಾರು 2.4346 ಹೆ. ನಷ್ಟು ಅರಣ್ಯ ಪ್ರದೇಶವು ರಸ್ತೆಗಾಗಿ ಉಪಯೋಗಿಸಲು ಪರ್ಯಾಯವಾಗಿ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸರ್ವೆ ನಂ. 53ರಲ್ಲಿ 4 ಎಕರೆ 20ಗುಂಟೆ ಮತ್ತು ದೇವರಾಳ್ಳಪಲ್ಲಿ ಸರ್ವೆ ನಂ. 62 ರಲ್ಲಿ 2-00 ಎಕರೆ ಪ್ರದೇಶವನ್ನು ಕಂದಾಯ ಇಲಾಖೆಯಿಂದ ಗುರುತಿಸಿ ನಕ್ಷೆಯೊಂದಿಗೆ ಇಲಾಖಾ ಅಭಿಪ್ರಾಯಕ್ಕಾಗಿ ಬಳಕೆದಾರರ ಸಂಸ್ಥೆಯವರು ಕೋರಿರುತ್ತಾರೆ.

ಅದರನ್ವಯ, ವಲಯ ಅರಣ್ಯಾಧಿಕಾರಿ, ಬಾಗೇಪಲ್ಲಿ ವಲಯ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚಿಂತಾಮಣಿ ಉಪ ವಿಭಾಗ ರವರು ಪ್ರಸ್ತಾಪಿತ ಪ್ರದೇಶಕ್ಕೆ ದಿನಾಂಕ: 15.07.2022 ರಂದು ಭೇಟಿ ನೀಡಿ, ಪರಿಶೀಲಿಸಿ, ಇಟಕಲದುರ್ಗ 4ನೇ ಬ್ಲಾಕ್‌ನ ರಾಜ್ಯ ಅರಣ್ಯ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸರ್ವೆ ನಂ. 51ರ ಅರಣ್ಯ ಪ್ರದೇಶದಲ್ಲಿ ಸುಮಾರು 2.4346 ಹೆ. ನಷ್ಟು ಅರಣ್ಯ ಪ್ರದೇಶವು ರಸ್ತೆಗಾಗಿ ಉಪಯೋಗಿಸುತ್ತಿರುವುದರಿಂದ ಪರ್ಯಾಯವಾಗಿ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸರ್ವೆ ನಂ. 53ರಲ್ಲಿ 4 ಎಕರೆ 20ಗುಂಟೆ ಮತ್ತು ದೇವರಾಳ್ಳಪಲ್ಲಿ ಸರ್ವೆ ನಂ. 62ರಲ್ಲಿ 2-00 ಎಕರೆ ಪ್ರದೇಶವು ಇಟಕಲದುರ್ಗ 4ನೇ ಬ್ಲಾಕ್‌ನ ರಾಜ್ಯ ಅರಣ್ಯ ಸಿಂಗಪ್ಪಗಾರಿಪಲ್ಲಿ ಗ್ರಾಮದ ಸರ್ವೆ ನಂ. 51ರ ಅರಣ್ಯ ಪ್ರದೇಶದ ಗಡಿಯಲ್ಲಿರುತ್ತದೆ ಹಾಗೂ ಸದರಿ ಪ್ರದೇಶದ ಭೂ ಪ್ರದೇಶ, ಸ್ಥಳಾಕೃತಿ, ಅಂಶ, ಮಣ್ಣು ಮತ್ತು ಇತರೆ ಭೌಗೋಳಿಕ ಲಕ್ಷಣಗಳು ಇಟಕಲದುರ್ಗ 4ನೇ ಬ್ಲಾಕ್‌ನ ರಾಜ್ಯ ಅರಣ್ಯಕ್ಕೆ ಹೋಲಿಕೆಯಾಗುತ್ತದೆ. ಹಾಗೂ ಸದರಿ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಪರಿಗಣಿಸಬಹುದಾಗಿರುತ್ತದೆ ಎಂಬ ವರದಿಯನ್ನು ಉಲ್ಲೇಖ (3) ಮತ್ತು (4)ರಲ್ಲಿ ಸಲ್ಲಿಸಿರುತ್ತಾರೆ.

ರಸ್ತೆಗಾಗಿ ಉಪಯೋಗಿಸುವ ಅರಣ್ಯ ಪ್ರದೇಶಕ್ಕೆ ಪರ್ಯಾಯವಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಆಯ್ಕೆ ಮಾಡಲಾದ ಅರಣ್ಯೇತರ ಪ್ರದೇಶಗಳಾದ ಬಾಗೇಪಲ್ಲಿ ತಾಲ್ಲೂಕು, ಸಿಂಗಪ್ಪಗಾರಿಪಲ್ಲಿ ಗ್ರಾಮ ಸರ್ವೆ ನಂ. 53ರಲ್ಲಿ 4-20 ಎ/ಗು ಮತ್ತು ದೇವರಾಳ್ಳಪಲ್ಲಿ ಗ್ರಾಮದ ಸರ್ವೆ ನಂ. 62ರಲ್ಲಿ 2-00 ಎ/ಗು ಪ್ರದೇಶಕ್ಕೆ ದಿ: 30.07.2022ರಂದು ಭೇಟಿ ನೀಡಿ ಸ್ಥಳ ಪರಿಶೀಲಿಸಿ ಆಯ್ಕೆಮಾಡಲಾದ ಎರಡು ಸರ್ವೆ ನಂ.ಗಳ 1 ಹೆ. ಪ್ರದೇಶದಲ್ಲಿ 1000 ಗಿಡಗಳನ್ನು ನೆಟ್ಟು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸೂಕ್ತವಾಗಿರುವ ಪ್ರದೇಶಗಳಾಗಿರುತ್ತವೆ ಎಂದು Sutibility Certificate ಪತ್ರವನ್ನು ನೀಡಲಾಗಿರುತ್ತದೆ.

ಮುಂದುವರೆದು, ಬಳಕೆದಾರರ ಸಂಸ್ಥೆಯವರಾದ ಕಾರ್ಯಪಾಲಕ ಅಭಿಯಂತರರು, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ಚಿಕ್ಕಬಳ್ಳಾಪುರ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಚಿಕ್ಕಬಳ್ಳಾಪುರ ರವರು ದಿನಾಂಕ: 03.10.2022ರಂದು ಆನ್‌ಲೈನ್ ಮುಖಾಂತರ Format-A, Part-I ರಲ್ಲಿ ಸಲ್ಲಿಸಲಾದ ಪ್ರಸ್ತಾವನೆಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ, ದಿ: 20.10.2022 ರಲ್ಲಿ ಮರು ಪ್ರಸ್ತಾವನೆ ಸಲ್ಲಿಸಿರುವುದಾಗಿ ಉಲ್ಲೇಖ (2)ರಲ್ಲಿ ವರದಿ ಸಲ್ಲಿಸುತ್ತಾ, ಪ್ರಸ್ತಾವನೆಗೆ ಸಂಬಂಧಪಟ್ಟ ದಾಖಲಾತಿಗಳನ್ನು 7 ಸೆಟ್‌ಗಳನ್ನು ಸಲ್ಲಿಸಿರುತ್ತಾರೆ. Format-A, Part-II ರಲ್ಲಿ ವಿಭಾಗಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಭರ್ತಿಮಾಡಿ ದಿನಾಂಕ: 07.12.2022ರಂದು ಆನ್‌ಲೈನ್‌ನಲ್ಲಿ ಸಲ್ಲಿಸಲಾಗಿರುತ್ತದೆ. (ಪ್ರತಿ ಅಡಕಗೊಳಸಿದೆ) ಬಳಕೆದಾರರ ಸಂಸ್ಥೆಯವರು ಪ್ರಸ್ತಾವನೆಗೆ ಸಂಬಂಧಪಟ್ಟ ದಾಖಲಾತಿಗಳ ಕಡತವನ್ನು 7 ಸೆಟ್‌ಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ, ಉಲ್ಲೇಖ(1)ರ ಪತ್ರದ ಪ್ರತಿ, ಪ್ರಸ್ತಾವನೆಗೆ ಸಂಬಂಧಿಸಿದಂತೆ, Part-I ಮತ್ತು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರ Part-II, Site inspection report ನೊಂದಿಗೆ ಈ ಕಛೇರಿಗೆ ಸಂಬಂಧಿಸಿದ Part-III ಲಗತ್ತಿಸಿ ಭೂ-ಪರಿವರ್ತನೆಯ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಮಾನ್ಯರ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಪ್ರಾದೇಶಿಕ), ಬೆಂಗಳೂರು

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

ರವಾನಿಸಲಾಗಿದೆ
ದಿನಾಂಕ 26-12-22

K.J/FC/6

**PART-III**

**(To be filled by the concerned Chief Conservator of Forests)**

| | | |
|---|---|---|
| 14) | Whether site, where the forest land involved is located has been inspected by concerned Chief Conservator of Forests (Yes/No). If yes, the date of inspection and observations made in from of inspection note to be enclosed | Not inspected. |
| 15) | Whether the concerned Chief Conservator of Forests agree with the information given in Part-B and the recommendations of Deputy Conservator of Forests. | I agree with the report of Deputy Conservator of Forests, Chikkaballapur Division, Chikkaballapura |
| 16) | Specific recommendation of concerned Chief Conservator of Forests for acceptance or otherwise of the proposal with detailed reasons. | As per the report of Deputy Conservator of forests, Chikkaballapura Division Chikkaballapura, Executive Engineer, Pradhana Manthri Grama Sadak Yojana (PMGSY) Chickballapura, Karnataka Rural Road, Development Agency (KRRDA) Chickballapura Proposed for Diversion of 2.4346 Ha Forest land in Sy No. 51 of Singappagaripalli Village, Itakaladurga IVth Block, Bagepalli Taluk, Chickballapura District, for improvement of Rural Road from Pathapalya to Pulanayakanapalli via Singappagaripalli & Peddanagarulu, as requirement of Forest Land for the project is barest minimum and there is no endangered & unique species, the project is for public utility, proposal may be accepted. |

**Date: 22-12-2022**

**Chief Conservator of Forests,**
**(Territorial) Bengaluru.**